SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 104 | ಶನಿವಾರ 15—12—45 | ಬಿಡಿ ಪ್ರತಿ 3 ಪೈ

ರೋಂನಲ್ಲಿ ಕಾಳಸಂತೆಖೋರರ ಹರತಾಳ !

ಸೈನಿಕರಿಗೆ ಯುದ್ಧಾನಂತರದ ಶಿಕ್ಷಣ

ನವದೆಹಲಿ, ಡಿ 15 — ಭಾರತದ ಎಲ್ಲೆಡೆಗಳಲ್ಲಿಯೂ ಸೈನೀಕರಿಗೆ ಯುದ್ಧಾನಂತರದ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆ. ಸೈನ್ಯದಿಂದ ನಿವೃತ್ತರಾಗುವುದಕ್ಕೆ ಮುಂಚೆ ಸಾವಿರಾರು ಸಿಪಾಯಿಗಳು ಹಲವಾರು ವೃತ್ತಿ ಶಿಕ್ಷಣಗಳನ್ನು ಪಡೆಯುತ್ತಿದ್ದಾರೆ ಅಲ್ಲದೆ ಜಾದಿನ ಕೇಂದ್ರದಲ್ಲಿ ಸಿಪಾಯಿಗಳಿಗೆ ವ್ಯವಸಾಯ, ಗೃಹ ಕೈಗಾರಿಕೆ, ಸರಕಾರಿ ಜೀಪಾಯ ಇವನ್ನು ಕಲಿಸಲು ಅಧಿಕಾರಿಗಳು ಶಿಕ್ಷಣ ಪಡೆಯುತ್ತಿದ್ದಾರೆ ಒಂಟಿ ಹಿಡಿನಳಿಗಳಲ್ಲಿ ತರಕಾರಿ ಬೆಳೆಯುವುದು, ಬಾತು ಕೋಳಿ ಮೊದಲಾದ ಸಾಕುವುದು ಮುಂತಾದ ಕಸಬುಗಳನ್ನು ಕೈಗೊಳ್ಳಲು ಪರೀಕ್ಷೆಗಳು ನಡೆಯುತ್ತಿವೆ. ಉತ್ತಮಗೊಳಿಸಿದ ಮಣ್ಣುಗಳಲ್ಲಿ ಕೆನೆಸ್ಟ್ರಾ ಕ್ಯಾಲಿಕೋ ಮೇಲೆ ಅಚ್ಚಹಾಕುವುದು, ಬಣ್ಣ ಹಾಕುವುದು ಸಾಬೂನು ತಯಾರಿ ಮುಂತಾದವನ್ನು ಕಲಿಸಲಾಗುತ್ತಿದೆ. ಈ ಶಿಕ್ಷಣ ಕೇಂದ್ರಗಳಲ್ಲಿ ಪ್ರಮಾಣ ಶಾಲೆಗಳು ಪುಸ್ತಕ ಭಂಡಾರ ವಿವಿಧ ನೃತ್ತಾಂತ ಶಾಲೆಗಳು ಸಿದ್ಧವಾಗಿವೆ. ಅಂದವಾದ ಹೂತೋಟಗಳೂ ಮನೋಹರ ಶಾಲೆಗಳೂ ಸಿದ್ಧವಾಗಿವೆ. ಸೈನಿಕರ ಅಭಿರುಚಿಗೆ ತಕ್ಕ ಶಿಕ್ಷಣ ಕೊಡಲಾಗುತ್ತದೆ.

ಂ ಂ

ಕಂಟ್ರಾಕ್ಟರ ಗುಮಾಸ್ತೆಗೆ ಕಠಿಣ ಶಿಕ್ಷೆ

ಮದರಾಸು, ಡಿ 15 — ಮದರಾಸಿನ ಟ್ರಾನ್ಸಪೋರ್ಟ್ ಕಂಟ್ರಾಕ್ಟರ ಗುಮಾಸ್ತ ಶ್ರೀ ಡಿ. ವಿ. ಗೋವಿಂದರಾಜಲುನಾಯ್ಡುರವರಿಗೆ ಲಂಚದ ಅಪಾದನೆಯ ಮೇಲೆ 6 ತಿಂಗಳ ಕಠಿಣ ಶಿಕ್ಷೆ ಮತ್ತು 500 ರೂಪಾಯಿ ದಂಡ ವಿಧಿಸಲಾಯಿತು.

ಆರೋಪಿತರು 75 ಎತ್ತಿನಗಾಡಿಗಳಿಗೆ ಒದಲಾಗಿ 150 ಗಾಡಿಗಳನ್ನು ಒದಗಿಸಲಾಗುತ್ತೆಂದು ಸುಳ್ಳು ಲೆಕ್ಕ ಕೊಟ್ಟರೆ ಅದಕ್ಕಾಗಿ 100 ರೂ. ಲಂಚ ಕೊಡುವುದಾಗಿ ಮೆಹಿಕಲ್ ಅಸೆಂಬ್ಲಿ ಕಂಡಕ್ಟರಿಗೆ ಹೇಳಿದರು. ಕಂಡಕ್ಟರು ಆಗಲೆಂದು ಒಪ್ಪಿಕೊಂಡು ಪೋಲಿಸಿಗೆ ತಿಳಿಸಿ ಬಿಟ್ಟರು. ಲಂಚವೆನ್ನು ಕೊಡುತ್ತಿದ್ದಾಗ ಶ್ರೀ ಡಿ. ವಿ. ಗೋವಿಂದರಾಜಲು ನಾಯ್ಡುರವರನ್ನು ದಸ್ತಗಿರಿ ಮಾಡಲಾಯಿತು.

.....

ಚಿನ್ನಾ ಬೆಳ್ಳಿ ಧಾರಣೆ

ಪೆನಂಗ್ 1 ಕ್ಕೆ	ರೂ. 56-0-0
ಚಿನ್ನ ತೊಲ 1 ಕ್ಕೆ	82-0-0
ಬೆಳ್ಳಿ	1-6-0

ಕಾಮನ್ಸ್ ಸಭೆಯಲ್ಲಿ ಮೌರ್ಕಸ್ ಹೇಳಿಕೆ ಪ್ರಕಾರ ಪಾರ್ಲಿಮೆಂಟಿನ ಅಶ್ರಯದಲ್ಲಿ ಭಾರತದ ನಿಯೋಗ ಹೊರಡುವುದು.

ಂ ಂ

ಪುಲಿಯಾದಲ್ಲಿ ಮೂವರು ಯುದ್ಧ ಪಾತಕಿಗಳು ಇರುವರೆಂದೂ ಅವರ ವಿಚಾರಣೆಯಾಗಬೇಕೆಂದೂ ಗೊತ್ತಾಗಿದೆ.

ಂ ಂ

ಹಿಂದೂ ಮಹಾಸಭೆಯ ಮಾಜಿ ಉಪಾಧ್ಯಕ್ಷ ವರದರಾಜನಾಯ್ಡು ಕಾಂಗ್ರೆಸಿಗೆ ಸೇರಿದರು.

ಂ ಂ

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಟ್ರಿನಿಟಿ ಕಾಲೇಜಿನಲ್ಲಿ ಓದುತ್ತಿರುವ ಮೈಸೂರಿನ ವಿದ್ಯಾರ್ಥಿ ಶ್ರೀ ರಾಜಗೋಪಾಲರು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಸಂಘದ ಕಾರ್ಯಕಾರಿ ಸಮಿತಿ ಸದಸ್ಯಕ್ಕೆ ಅಧಿಕ ಓಟಿನಿಂದ ಚುನಾಯಿಸಲ್ಪಟ್ಟಿರುವುದಾಗಿ ಗೊತ್ತಾಗಿದೆ.

ಂ ಂ

ಕರಾಚಿಯ ಸಿಂಧ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಹಾಜರಾತಿ ಕಾಲದಲ್ಲಿ ಜೈಹಿಂದ್ ಎಂದಿದ್ದನ್ನು ಪ್ರತಿಬಂಧಿಸಿದ್ದಕ್ಕಾಗಿ ವಿದ್ಯಾರ್ಥಿಗಳು ತರಗತಿ ಪರಿತ್ಯಾಗ ಮಾಡಿದರು.

ಂ ಂ

ಸುಭಾಷರ ಫೋಟೋವನ್ನು ಪ್ರದರ್ಶಿಸಕೂಡದೆಂದು ಬರ್ಮಾ ಸರ್ಕಾರದ ಆಜ್ಞೆಯಾಗಿದೆ.

ಂ ಂ

ನಾಗಪುರದಲ್ಲಿ ನಡೆದ ನಿವ್ಮನರ್ಗ ಫೆಡರೇಷನ್‌ನಲ್ಲಿ ನಾವು ಕಾಂಗ್ರೆಸಿನವರಲ್ಲವೆಂದು ಕೋರಿಸುವ ಸಲುವಾಗಿ ತಿರಂಗಿನ ಬದಲಾದಿ ಬೋಪಿಗೆ ಬಿಂಕಿಯಿಟ್ಟರು

ಲಂಡನ್ ಡಿ 12— ಈ ದಿನದ ಪ್ರಾತಃಕಾಲ ರೋಂನಿಂದ ಆಶ್ಚರ್ಯಕರವಾದ ಸುದ್ದಿ ಬಂದಿದೆ. ಅದೇನೆಂದರೆ ಕಾಳಸಂತೆಖೋರರು 'ಪೋಲೀಸು ದಸ್ತಗಿರಿ' ಯ ವಿರುದ್ಧವಾಗಿ ಮುಷ್ಕರ ಪ್ರಾರಂಭಿಸಿದ್ದಾರೆ. ಪೋಲೀಸರ ದಸ್ತಗಿರಿಯಿಂದ ತಮ್ಮ ವ್ಯಾಪಾರ ಹಾಳಾಗುತ್ತಿರುವುದೆಂದು ಕಾಳಸಂತೆಖೋರರು ಗಮನಕ್ಕೆ ತಂದಿದ್ದಾರೆ. ಕೆಲವು ನರ್ತಕರು ಮಾರ್ಕೆಟ್ ಬಳಿ ಸಂಚರಿಸಿ ಹರತಾಳ ಪನ್ನಾಚರಿಸಬೇಕೆಂದು ಹೇಳುತ್ತಿದ್ದರು.

ಂ ಂ

ದಿ ಹೇಗ್, ಡಿ 12 — ಹಿಟ್ಲರಿಂದ 'ನೆದರಲೆಂಡಿನ ಜನತೆಗೆ ಫ್ಯೂರರ್' ಎಂದು ಕರೆಯಲ್ಪಟ್ಟಿದ್ದ ಮುತ್ತು ಡಚ್ ರಾಷ್ಟ್ರೀಯ ಸಮಿತಿಯ ಸದಸ್ಯರಾದಿಗಳ ಮಾಜಿ ನಾಯಕ ಡಾ || ಏಂಟ್ಜೆಮೆಸರ್ಟ್‌ಗೆ ವಿಶೇಷ ಡಚ್ ನ್ಯಾಯಾಸ್ಥಾನವು ಮರಣದಂಡನೆಯನ್ನು ವಿಧಿಸಿದೆ.

ಂ ಂ

ಕಲ್ಕತ್ತಾ, ಡಿ 12 — ಸೋದಾಪುರದ ಆಶ್ರಮಕ್ಕೆ ಗಾಂಧೀಜೀಗೆ ಲಂಡನ್ನಿಂದ ಟೆಲಿಫೋಬಂತು. ವಿಷಯ ತಿಳಿದಿಲ್ಲ

ಂ ಂ

ಆಜಾದ್ ಫೌಜಿನ ಅಧಿಕಾರಿ ಷಾನವಾಜರ ಉಮೇದುವಾರಿಕೆ (ಪಂಜಾಬಿನ ಕ್ಷೇತ್ರ) ಯನ್ನು ಪ್ರತಿಸ್ಪರ್ಧಿಯೊಬ್ಬ ನಿಂತಿದ್ದಕ್ಕಾಗಿ ವಾಪಸು ತೆಗೆದುಕೊಳ್ಳಲಾಗುವುದು.

ಂ ಂ

ಪ್ರತಿಬಂಧಕವಿಲ್ಲದೆ ಪ್ಯಾಲಿಸ್ತಾನಿಗೆ ಯಹೂದ್ಯರು ಪ್ರವೇಶಿಸ ಬೇಕೆಂದು ಅಮೇರಿಕಾ ಆಡಳಿತ ವಿದೇಶಾಂಗ ಸಮಿತಿ ನಿರ್ಣಯಿಸಿದೆ.

ವಿವಿಧ ವೃತ್ತ

ಗಾಂಧೀ—ವೇವಲ್ ಮೃತ್ಯೆ ಕಲ್ಕತ್ತಾದಲ್ಲಿ ಭೇಟಿಯಾಗುವರೆಂದೂ, ಅದಕ್ಕಾಗಿ ಗಾಂಧೀಜೀ ವಿಶ್ವಭಾರತಿ ಪ್ರಯಾಣವನ್ನು ಮುಂದಿರಿಸಿರುವರೆಂದೂ ತಿಳಿಯಬಂದಿದೆ.

ಂ ಂ

ಆಂಧ್ರ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವ ಸಮಾರಂಭದಲ್ಲಿ ಸರ್ ರೆಡ್ಡಿಯವರು ಮಾತನಾಡುತ್ತಾ ಸರ್ಕಾರಕ್ಕೂ ಕಾಂಗ್ರೆಸಿಗೂ ಘರ್ಷಣೆ ಆಗುವ ಸಂಭವವಿದೆಯೆಂದರು.

ಂ ಂ

ಇದುವರೆಗೆ ಬಂಗಾಳದಲ್ಲಿ 1646 ರಾಜಕೀಯ ಖೈದಿಗಳ ಬಿಡುಗಡೆಯಾಗಿರುವುದಾಗಿ ಪ್ರಕಟವಾಗಿದೆ.

ಂ ಂ

ನಮ್ಮ ವಿಷಯಗಳೂ ಮಾಸ್ಕೋ ಸಮ್ಮೇಳನದಲ್ಲಿ ಸೇರಿರುವ ಪ್ರಯುಕ್ತ ನಮ್ಮ ಪ್ರತಿನಿಧ್ಯಕ್ಕೂ ಬಾಧ್ಯತೆಯಿರುವುದಾಗಿ ಪರ್ಷಿಯಾ ನಾಯಕತ್ರಯರಿಗೆ ತಿಳಿಸಿದೆ.

ಂ ಂ

ಇಂಡುನೇಷಿಯನ್ನರಿಗೆ ಸುಮಾತ್ರದ ಬೆಂಬಲವಿರುವುದಾಗಿ ಅಲ್ಲಿಯ ನಾಯಕ ಅಮಿಾಲ್ ತಿಳಿಸಿದ್ದಾರೆ.

ಂ ಂ

ಪ್ರಪಂಚ ಸಂಸ್ಥೆಗೆ ಯುರೋಪಿನ ಸಣ್ಣದೊಂದು ರಾಜ್ಯದಲ್ಲಿ ಕೇಂದ್ರವಿರಬೇಕೆಂದು ಬ್ರಿಟ್ ಓತ್ತಿ ಹೇಳಿದೆ.

ಂ ಂ

ಪರ್ಷಿಯಾದಿಂದ ಸೈನ್ಯಗಳು ವಾಪಸು ಹೋಗಬೇಕೆಂದು ಪರ್ಷಿಯಾ ವಿದೇಶಾಂಗ ಮಂತ್ರಿಯು ರಷ್ಯಾ ಅಮೇರಿಕಾ ಬ್ರಿಟನ್ನುಗಳಿಗೆ ತಿಳಿಸಿರುವನು.

ಂ ಂ

ಬ್ರಿಟಿಷ್ ಅಮೇರಿಕಾ ಹಣ ಕಾಸಿನ ಒಪ್ಪಂದದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಅಂಗೀಕಾರ ದೊರೆತಿದೆ.

ಂ ಂ

ಮುಂದಿನ ವರ್ಷದ ಕೊನೆಯಲ್ಲಿ ಅಮೆರಿಕವು 14 ವ್ಯಾಪಾರ ರಾಷ್ಟ್ರಗಳ ಸಮ್ಮೇಳನವನ್ನು ಕರೆಯುವುದು.

ಂ ಂ

ಜರ್ಮನ್ ಮೇಲಿನ ಹಠಕೋಟಿ ಸೋಯುಕ್ತ ಮಿತ್ರ ಮಂಡಳದ ಪಶ್ಚಿಮಜೋನೆಂದು ರಷ್ಯಾ ಸೂಚಿಸಿದೆ.

ಯ ಹಕ್ಕು ಭಾದ್ಯತೆ ' ಮಸೂದೆಯನ್ನು ಮಂಡಿಸಿದರು. ಮಸೂದೆಗೆ ಕಾಂಗ್ರೆಸ್ ಪಕ್ಷದ ಬೆಂಬಲವಿಲ್ಲದೆ ಗೆಲುವಾಯಿತು.

ಡಾ || ರಾಯ್ಕರರವರು ಮೈಸೂರು ನಗರಾಭಿವೃದ್ಧಿ ಮಸೂದೆಯನ್ನು ಸಭೆಯು ಮುಂದಿಟ್ಟರು ಕಾಲವಿಲ್ಲದ್ದರಿಂದ ನಾಳೆದಿನಕ್ಕೆ ಹೋಯಿತು.

4 ಘಂಟೆಯ ಮೇಲೆ ಚರ್ಚೆಗೆ ತೆಗೆದು ಕೊಳ್ಳಲ್ಪಟ್ಟ ವಿಶ್ವವಿದ್ಯಾನಿಲಯದ ಮೇಲಿನ ನಿಲುವಳಿ ಸೂಚನೆ ತೀವ್ರವಾಗಿ ಚರ್ಚಿಸಲ್ಪಟ್ಟ ಅಂಗೀಕಾರವಾಯಿತು

ತಾ || 6-12-45 ನೇ ಗುರುವಾರ ಬೆಂಗಳೂರಿನ ಸುಪ್ರಸಿದ್ಧ ವರ್ತಕರೂ ಮತ್ತು ಪೌರಸಭಾ ಸದಸ್ಯರೂ ಆದ ಸಿಂಗಂ ರಂಗಸ್ವಾಮಯ್ಯಂಗಾರ್ಯರು ಡಾ|| ರಾಯ್ಕರವರ ಅಧ್ಯಕ್ಷತೆಯಲ್ಲಿ ತಮ್ಮ ಸ್ವಗೃಹದಲ್ಲಿ ಶಸ್ತ್ರ ನೈದ್ಯ ಪ್ರವೀಣೆ ಡಾ || ಆಲ್ಬುಕರ್ಕರನ್ನು ಮತ್ತು ರಾಜಧರ್ಮ ಪ್ರಸಕ್ತ ಸಿಂಗಾರುವೇಲು ಮೊದ್ದಿಯಾರರನ್ನು ಸತ್ಕರಿಸುವರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಪಿಂಕ್ ಕ್ಲಾಡ್ ಆರ್ಚರ್ಟ್ ಲೇಕರು. ಭಾರತದ ಮಹಾ ಸೇನಾನಿ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ವೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಂಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Ranjit 2 nd Week

BANSARI

ಚಾರ್ಲಿ — ಈಶ್ವರ್‌ಲಾಲ್ — ಷಮಾಮ್ — ದೀಕ್ಷಿತ್ — ಕೇಸರಿ

ಮುಂತಾದವರು ಪಾತ್ರವಹಿಸಿರುವ

ಬನ್ಸರಿ

ಪ್ರತಿ ದಿನ 3 ಆಟಗಳು .... (ಹಿಂದಿ ಚಿತ್ರ)

AT Opera— Now running to crowded houses

Return of Fighting Hero

— with —

Herman Brix & Lynn Roberts

From 8-12-45 JITTERBUGS

with Laural & Hardy

Morning Shows From 7-12-45 — Immortal Sergeant